# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.

## ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ.4/2018

ಅ.ಸಾ ಃ 2
ದೋಸಾ ಃ 2

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಬಾಬು ಸುಣಗಾರ |
| ತಂದೆಯ ಹೆಸರು | ಃ | ಮಹದೇವಪ್ಪ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, |
| ವಾಸ ಸ್ಥಳ | ಃ | ಹಾವೇರಿ |

ದಿನಾಂಕಃ**25/07/2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –**

1. ನಾನು 2009 ರಿಂದ 2022 ರವರೆಗೆ ಸರ್ಕಾರಿ ಪ್ರೌಢಶಾಲೆ ಹಾವೇರಿಯಲ್ಲಿ ಶಿಕ್ಷಕ ಅಂತಾ ಕೆಲಸ ನಿರ್ವಹಿಸಿದ್ದೇನೆ.

2. ದಿ 09/08/2017 ರಂದು ಬಿಇಓ ಕಛೇರಿಯಿಂದ ಫೋನ್ ಮಾಡಿ ನನಗೆ ಎಸಿಬಿ ಕಛೇರಿ ಹಾವೇರಿಗೆ ಹೋಗಲು ಸೂಚನೆ ಕೊಟ್ಟರು. ನಾನು ಎಸಿಬಿ ಕಛೇರಿಗೆ ಅದೇ ದಿನ ಮದ್ಯಾಹ್ನ 2-00 ಘಂಟೆಗೆ ಹೋದೆವು. ಚಾಸಾ-3 ನಾನು ಹೋಗುವದೊರಳಗೆ ಹಾಜರು ಇದ್ದರು. ಚಾಸಾ-18 ಕೂಡಾ ಹಾಜರು ಇದ್ದು ನಮ್ಮನ್ನು ಪರಿಚಯ ಮಾಡಿಕೊಂಡರು. ಚಾಸಾ-1 ಕೂಡಾ ಹಾಜರು ಇದ್ದರು. ಚಾಸಾ-1 ರವರು ಬೋರ್ವೆಲ್ ಸಂಪರ್ಕ ಕೊಡಲು ಬಂಕಾಪುರ ಶಾಖಾಧಿಕಾರಿ ಕೆಇಬಿ ಅರ್ಜಿ ಕೊಟ್ಟಿದ್ದು. ಅವರು ಲಂಚ ಕೇಳಿದ್ದಾರೆ ಅಂತಾ ಎಸಿಬಿರವರಿಗೆ ದೂರು ಕೊಟ್ಟಿದ್ದು ಗೊತ್ತಾಯಿತು.

3. ಚಾಸಾ-18 ನಮಗೆ ಪಂಚರಾಗಿ ಕೆಲಸ ಮಾಡಲು ಸೂಚನೆ ಕೊಟ್ಟರು. ಚಾಸಾ-18 ನಮಗೆ ಪಿನಾಪ್ತಲಿನ್ ಪೌಡರ್ ಮತ್ತು ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತೋರಿಸಿ ಅದರ ಪ್ರಕ್ರಿಯೆಗಳನ್ನು ಹೇಳಿದರು. ಎಸಿಬಿ ಪೋಲೀಸರು 2000 ರೂಪಾಯಿ ಮುಖ ಬೆಲೆಯ ಒಂದು, 500

ರೂಪಾಯಿ ಮುಖಬೆಲೆಯ 4 ನೋಟುಗಳ ಮೇಲೆ ಪಿನಾಪ್ತಲಿನ್ ಪೌಡರ್ ಸಿಂಪಡಿಸಿದರು. ನೋಟುಗಳ ನಂಬರು ನೆನಪು ಇಲ್ಲ. ಸಾಕ್ಷಿ ನೋಟುಗಳ ವಿವರ ಬರೆದ ದಾಖಲೆ ಮೇಲೆ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ-5, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

4. ಚಾಸಾ-1 ಮತ್ತು ಆರೋಪಿತರ ಧ್ವನಿ ಸಂಭಾಷಣೆ ಸಂಗ್ರಹ ಆಗಿದ್ದು ಮೊಬೈಲ್ ಮುಖಾಂತರ ನಮಗೆ ತಿಳಿಸಿರುತ್ತಾರೆ. ಸದರಿ ಸಂಭಾಷಣೆಯನ್ನು ಸಿಡಿಗೆ ವರ್ಗಾವಣೆ ಮಾಡಿದ್ದು ಅದನ್ನು ಸೀಲ್ ಮಾಡಿ ಜಪ್ತಿ ಮಾಡಲಾಯಿತು. ದ್ರಾವಣವನ್ನು ಬಾಟಲ್‌ನಲ್ಲಿ ತೆಗೆದು ಬಟ್ಟೆ ಕಟ್ಟಿ ಸೀಲ್ ಮಾಡಿ ಪ್ಯಾಕ್ ಮಾಡಲಾಯಿತು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ-1 ಅಂತಾ ಗುರುತಿಸಲಾಯಿತು.

> (ತನಿಖಾಧಿಕಾರಿ ಸೀಲು ಮಾಡಿದ ಡಿವಿಡಿ ಹಾಜರುಪಡಿಸಿದ್ದು, ಅದನ್ನು ಮಾನ್ಯ ವಿಸಅ ಮತ್ತು ಆರೋಪಿ ಪರ ವಕೀಲರ ಸಮಕ್ಷಮ ಸೀಲು ಓಪನ್ ಮಾಡಿ ಲೋಕಾಯುಕ್ತ ಕಛೇರಿಯಿಂದ ತಂದ ಲ್ಯಾಪಟ್ಯಾಪ ಮುಖಾಂತರ ಪ್ಲೇ ಮಾಡಲಾಯಿತು.)

5. ಸಾಕ್ಷಿಗೆ ಡಿವಿಡಿಯನ್ನು ಲ್ಯಾಪ್‌ಟಾಪ್ ಮುಖಾಂತರ ಹಾಕಿ ಸಂಭಾಷಣೆಯನ್ನು ಕೇಳಿಸಿದ್ದು, ಚಾಸಾ-1, 1 ಮತ್ತು 2 ನೇ ಆರೋಪಿಯ ಧ್ವನಿಯನ್ನು ಕೇಳಿ ಗುರುತಿಸಿರುತ್ತಾರೆ. ಸದರಿ ಸಿಡಿಯನ್ನು ನಿಪಿ-6 ಅಂತಾ ಗುರುತಿಸಲಾಯಿತು. ಚಾಸಾ-3 ನೋಟುಗಳನ್ನು ಮುಟ್ಟಿದಾಗ, ಅವರ ಕೈಯನ್ನು ದ್ರಾವಣದಲ್ಲಿ ಅದ್ದಿದಾಗ ಗುಲಾಬಿ ಬಣ್ಣಕ್ಕೆ ಬಂದಿತು. ಸದರಿ ದ್ರಾವಣವನ್ನು ಎಸಿಬಿ ಪೊಲೀಸರು ಪ್ಯಾಕ್ ಮಾಡಿ ಸೀಲ್ ಮಾಡಿ ಬಾಟಲ್‌ನಲ್ಲಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ-2 ಅಂತಾ ಗುರುತಿಸಲಾಯಿತು.

6. ಪೊಲೀಸರು ನಿಪಿ-2 ವಹಿಸುವಿಕೆ ಪಂಚನಾಮೆ ತಯಾರಿಸಿರುತ್ತಾರೆ. ಅದಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ-2 ಕ್ಕೆ ಸಾಕ್ಷಿ ಸಹಿ ನಿಪಿ-2 (ಬಿ) ಅಂತಾ ಗುರುತಿಸಲಾಯಿತು. ನಾನು ಚಾಸಾ-3, ಚಾಸಾ-18 ಮತ್ತು ಇತರೆ ಸಿಬ್ಬಂದಿ ಟಾಟಾ ಸುಮೋ ವಾಹನದಲ್ಲಿ ಬಂಕಾಪುರ ಹತ್ತಿರ ಹೋದೆವು. ಚಾಸಾ-1 ರವರು 2 ನೇ ಆರೋಪಿಗೆ ಫೋನ್ ಮಾಡಿ ಬಂದಿದ್ದೇವೆ ಮನೆಗೆ ಬರುತ್ತೇವೆ ಅಂತಾ ಹೇಳಿದರು. ಚಾಸಾ-1, ನಾನು 2 ನೇ ಆರೋಪಿಯ ಮನೆಗೆ ಹೋದೆವು. ಚಾಸಾ-1 ರವರಿಗೆ ಎಸಿಬಿ ಪೊಲೀಸರು ಧ್ವನಿ ಸಂಗ್ರಹಣಾ ಯಂತ್ರವನ್ನು ಕೊಟ್ಟಿದ್ದರು. ಅವರ ಮನೆಗೆ ಹೋದ ಮೇಲೆ ಅದನ್ನು ಚಾಲು ಮಾಡಲು ಹೇಳಿದರು.

7. ಚಾಸಾ-1 ದ್ವನಿ ಸಂಗ್ರಹಣ ಯಂತ್ರವನ್ನು ಆನ್ ಮಾಡಿ 2 ನೇ ಆರೋಪಿ ಮನೆಗೆ ಹೋದಾಗ ಸಂಜೆ 5-30 ಆಗಿತ್ತು. ಚಾಸಾ-1 ಮತ್ತು 2 ನೇ ಆರೋಪಿ ಮಾತನಾಡಿದರು. ಚಾಸಾ-1, 2 ನೇ ಆರೋಪಿ ಕೇಳಿದ ಹಾಗೆ ಹಣ ತಂದಿದ್ದೇವೆ ಕೊಡುತ್ತೇವೆ ಅಂತಾ ಹೇಳಿದರು. 2 ನೇ ಆರೋಪಿ 1 ನೇ ಆರೋಪಿ ಕೈಯಲ್ಲಿ ಕೊಡಲು ಚಾಸಾ-1 ರವರಿಗೆ ಸೂಚನೆ ಕೊಟ್ಟರು. 2 ನೇ ಆರೋಪಿ ಚಾಸಾ-1 ಗೆ ಹಣವನ್ನು ಟೇಬಲ್ ಮೇಲೆ ಇಡಲು ಸೂಚನೆ ಕೊಟ್ಟರು. 2 ನೇ ಆರೋಪಿ ಮನೆಯಿಂದ ನಾನು ಚಾಸಾ 1 ಹೊರಗಡೆ ಬಂದೆವು. ಚಾಸಾ-1 ಕರ್ಚಿಪ್ ಮುಖಾಂತರ ಮುಖವನ್ನು ವರಿಸಿಕೊಂಡರು. ಚಾಸಾ-18 ಇದನ್ನು ಗಮನಿಸಿದರು.

8. ಚಾಸಾ-18 ಮತ್ತು ಇತರ ಪೊಲೀಸರು ಸ್ಥಳಕ್ಕೆ ಬಂದ ಮೇಲೆ ಎಲ್ಲಾ ವಿಷಯವನ್ನು ಚಾಸಾ 1 ಮತ್ತು ನಾನು ತಿಳಿಸಿದೆವು. 2 ನೇ ಆರೋಪಿ ಬೈಕ್ ಹತ್ತಿ ಹೋದರು. 2 ನೇ ಆರೊಪಿ ಕೆಇಬಿ ಕಛೇರಿಗೆ ಹೋಗಿದ್ದರೆ ಅಂತಾ ಗೊತ್ತಾಯಿತು. ನಾನು ಚಾಸಾ1, 3, 18 ಇತರ ಎಸಿಬಿ ಪೊಲೀಸರು ಬಂಕಾಪುರದ ಕೆಇಬಿ ಕಛೇರಿಗೆ ಹೋದಾಗ ಸಂಜೆ 5-45 ರಿಂದ 6-00 ಘಂಟೆಯಾಗಿತ್ತು. ನಾವು ಕೆಇಬಿ ಕಛೇರಿ ತಲುಪಿದಾಗ 2 ನೇ ಆರೋಪಿ ಅಲ್ಲಿ ಹಾಜರು ಇದ್ದ. ಕೆಇಬಿ ಸಿಬ್ಬಂದಿಯವರು ಇದ್ದರು.

9. ಚಾಸಾ-18 ತಮ್ಮ ಹುದ್ದೆಯ ವಿಷಯವನ್ನು ಪರಿಚಯಿಸಿ 2 ನೇ ಆರೋಪಿಗೆ ಚಾಸಾ 1 ಕೊಟ್ಟ ಹಣವನ್ನು ಕೊಡಿರಿ ಅಂತಾ ಕೇಳಿದರು. 2 ನೇ ಆರೋಪಿ ನನ್ನ ಹತ್ತಿರ ಹಣ ಇಲ್ಲ ಅಂತಾ ಹೇಳಿದರು. 2 ನೇ ಆರೋಪಿಯನ್ನು ಪರೀಕ್ಷಿಸಿ ನೋಡಿದಾಗ ಅವನ ಹತ್ತಿರ ಹಣ ಇರಲಿಲ್ಲ. ಚಾಸಾ-18 ರವರು 2 ನೇ ಆರೋಪಿಯನ್ನು ಕೇಳಿದಾಗ ಹಣ ಮನೆಯಲ್ಲಿ ಇದೆ ಅಂತಾ ಹೇಳಿದ. ನಾನು, ಚಾಸಾ-1, 3,18 ಮತ್ತು ಪೊಲೀಸ್ ಸಿಬ್ಬಂದಿ 2 ನೇ ಆರೋಪಿಯ ಜೊತೆ ಅವನ ಮನೆಗೆ ಬಂದೆವು. ಪೊಲೀಸರು 2 ನೇ ಆರೋಪಿಗೆ ಹಣ ಎಲ್ಲಿ ಇಟ್ಟಿದ್ದೀಯಾ ಅಂತಾ ಕೇಳಿದರು. 2 ನೇ ಆರೋಪಿ ಟೇಬಲ್ ಮೇಲೆ ಇಟ್ಟ ಹಣವನ್ನು ಎಸಿಬಿ ಪೊಲೀಸರಿಗೆ ಕೊಟ್ಟರು.

10. 2 ನೇ ಆರೋಪಿ ಹಣದ ಮೇಲೆ ಕವರ ಇಟ್ಟಿದ್ದೇನೆ ಅಂತಾ ಹೇಳಿದರು. 2 ನೇ ಆರೋಪಿಯ ಬಲ ಕೈಯನ್ನು ಸೋಡಿಯಂ ದ್ರಾವಣದಲ್ಲಿ ಅದ್ದಿದಾಗ ಅದು ಏನೂ ಬದಲಾವಣೆ ಆಗಲಿಲ್ಲ. ಸದರಿ ದ್ರಾವಣವನ್ನು ಎಸಿಬಿ ಪೊಲೀಸರು ಬಾಟಲನಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು ಮಾ-3 ಅಂತಾ ಗುರುತಿಸಲಾಯಿತು.

11. ಪೋಲೀಸರು ಸ್ಥಳದಲ್ಲಿ ಪ್ರಕ್ರಿಯೆ ನಡೆಯುವಾಗ ಫೋಟೋ ತೆಗೆದರು ಮತ್ತು ಪಂಚನಾಮೆ ಬರೆದರು ಅದಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳದಲ್ಲಿ2000 ರೂಪಾಯಿ ಮುಖ ಬೆಲೆಯ ಒಂದು, 500 ರೂಪಾಯಿ ಮುಖಬೆಲೆಯ 4 ನೋಟುಗಳನ್ನು ಜಪ್ತಿ ಮಾಡಿದರು. ಕಛೇರಿಯಲ್ಲಿ ಚಾಸಾ-1ಗೆ ಲಂಚಕ್ಕೆ ಕೊಡಲು ಕೊಟ್ಟಂತಹ ಹಣ ಅಂತಾ ಗುರುತಿಸಲಾಯಿತು. 2 ನೇ ಆರೋಪಿಯ ಮನೆಯ ಬಗ್ಗೆ ನಕಾಶೆ ಮಾಡಿ ಪಂಚನಾಮೆ ತಯಾರಿಸಲಾಯಿತು. ಸಾಕ್ಷಿ 1 ನೇ ಆರೋಪಿಯನ್ನು ನೋಡಿ ಗುರುತಿಸಿದ್ದು ಇರುತ್ತದೆ. ಎಸಿಬಿ ಇನ್ನೊಂದು ಪೊಲೀಸರು 1 ನೇ ಆರೋಪಿಯನ್ನು ಅದೇ ದಿನ ರಾತ್ರಿ 8-30ಕ್ಕೆ ಬಂಕಾಪುರ ಕೆಇಬಿ ಕಛೇರಿಗೆ ಕರೆದುಕೊಂಡು ಬಂದರು.

12. ಎಸಿಬಿ ಪೊಲೀಸರು 1 ನೇ ಆರೋಪಿಯ ಹೇಳಿಕೆಯನ್ನು ಕೂಡಾ ಪಡೆದುಕೊಂಡಿರುತ್ತಾರೆ. ನಿಪಿ-4ಕ್ಕೆ ಸಾಕ್ಷಿ ಸಹಿ ನಿಪಿ-4 (ಬಿ) ಅಂತಾ ಗುರುತಿಸಲಾಯಿತು. ಈ ಹಂತದಲ್ಲಿ 4000 ಹಣ ನೋಡಿದರೆ ಗುರುತಿಸುತ್ತೇನೆ. 2ನೇ ಆರೋಪಿ ಕಡೆಯಿಂದ ಆಧಾರ ಕಾರ್ಡ, ಗುರುತಿನ ಚೀಟಿ ಇತರ ವಸ್ತುಗಳನ್ನು ತೋರಿಸಿ ವಾಪಸ್ಸು 2 ನೇ ಆರೋಪಿಗೆ ಕೊಟ್ಟಿರುತ್ತಾರೆ.

(ಮಾನ್ಯ ವಿಸಅ ರವರು ಬಣ್ಣದ ಪೋಟೋಗಳನ್ನು ಗುರುತಿಸಲು ಮನವಿ ಮಾಡಿರುತ್ತಾರೆ. ಆರೋಪಿ ಪರ ವಕೀಲರಾದ ಶ್ರೀ ಯು.ಎನ್.ಜಿ. ವಕೀಲರು ಬಣ್ಣದ ಪೋಟೋಗಳು, ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಗಳನ್ನು ಹಾಜರುಪಡಿಸದೇ ಇರವುದರಿಂದ ಅವುಗಳನ್ನು ಗುರುತಿಸಲು ತಕರಾರು ಎತ್ತಿರುತ್ತಾರೆ. ಬಣ್ಣದ ಪೋಟೋಗಳು ಪ್ರಾಥಮಿಕ ಸಾಕ್ಷ್ಯ ಆಗುವುದಿಲ್ಲ. ತನಿಖಾಧಿಕಾರಿ ಬಣ್ಣದ ಪೋಟೋಗಳ ಪೂರಕವಾಗಿ ಸಿ.ಡಿ., ಪೆನಡ್ರೈವ ಮತ್ತು ನೆಗೆಟಿವ್ ಮತ್ತು ಕಲಂ-65(ಬಿ) ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರ ಕೊಟ್ಟಿರುವುದಿಲ್ಲ. ಆದ್ದರಿಂದ ಅವುಗಳನ್ನು ಗುರುತಿಸಬೇಕೆಂಬ ಮಾನ್ಯ ವಿಸಅ ರವರ ಮನವಿಯನ್ನು ತಳ್ಳಿಹಾಕಲಾಯಿತು.)

(ಈ ಹಂತದಲ್ಲಿ ಸಾಕ್ಷಿಯು ನೀಡಿರುವ ಹೇಳಿಕೆ ಹಾಗೂ ಸಾಕ್ಷಿಯ ಮುಖ್ಯ ವಿಚಾರಣೆಯನ್ನು ಪರಿಶೀಲಿಸಿ, ಅವು ಪರಸ್ಪರ ವ್ಯತಿರಿಕ್ತವಾಗಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಕೋರಿದ್ದು ಮತ್ತು ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಸರ್ಕಾರಿ ಅಭಿಯೋಜಕರು ಕೋರಿದ್ದರಿಂದ ಅನುಮತಿಸಲಾಗಿದೆ.)

## ಪಾಟೀ ಸವಾಲುಃ ಪ್ರಾಜ್ಞ ವಿಶೇಷ ಸರ್ಕಾರಿ ಅಭಿಯೋಜಕರಿಂದಃ –

13. 2ನೇ ಆರೋಪಿ ಮನೆಗೆ ಹೋಗಿ ಬಂದ ನಂತರ ಸೋಡಿಯಂ ಕಾರ್ಬೋನೆಟ್ ದ್ರಾವಣವನ್ನು ಸ್ಯಾಂಪಲ್ ತೆಗೆಯಲಾಯಿತು ಎಂದು ಸೂಚಿಸುವುದು ನಿಜ. ಸದರಿ ದ್ರಾವಣವನ್ನು ಎಸಿಬಿ ಪೊಲೀಸರು ಬಾಟಲನಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-4 ಅಂತಾ ಗುರುತಿಸಲಾಯಿತು.

14. 2 ನೇ ಆರೋಪಿಯ ಎಡಗೈ ಬೆರಳುಗಳನ್ನು ಅದ್ದಿ ತೊಳೆದ ದ್ರಾವಣವನ್ನು ಎಸಿಬಿ ಪೊಲೀಸರು ಬಾಟಲನಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-5 ಅಂತಾ ಗುರುತಿಸಲಾಯಿತು. ಲಂಚದ ಹಣವನ್ನು ಇಟ್ಟಿದ್ದ ಭಾಗವನ್ನು ಹತ್ತಿಯಿಂದ ಒರೆಸಿದ ಸೋಡಿಯಂ ಕಾರ್ಬೊನೇಟ್ ದ್ರಾವಣವನ್ನು ಎಸಿಬಿ ಪೊಲೀಸರು ಬಾಟಲನಲ್ಲಿ ಹಾಕಿ ಪ್ಯಾಕ್ ಮಾಡಿ ಸೀಲ್ ಮಾಡಿ ಜಪ್ತಿ ಮಾಡಿದರು. ಸದರಿ ದ್ರಾವಣದ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮುಮಾ-6 ಅಂತಾ ಗುರುತಿಸಲಾಯಿತು.

15. ದಿನಾಂಕಃ27/09/2023 ರ ಆದೇಶದ ಪ್ರಕಾರ ರೂ.2,000/- ಮುಖಬೆಲೆಯ ನೋಟು ಅಮಾನ್ಯವಾಗಿದ್ದು, ಅದನ್ನು ಆರ್.ಬಿ.ಐ.ರವರಿಗೆ ಕಳಿಸಿದ್ದು, ಸದರಿ ನೋಟಿನ ಬಣ್ಣದ ಝರಾಕ್ಸ ನೋಟುಗಳನ್ನು (ನೋಟಿನ ಎರಡು ಮುಖಗಳು ಒಂದೇ ಪುಟದಲ್ಲಿ) ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಅಂತಾ ಗುರುತಿಸಲಾಯಿತು. ಸಾಕ್ಷಿ ಉಳಿದ ರೂ.500/- ಮುಖಬೆಲೆಯ 4 ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ.

(ಮುಂದುವರೆದ ಹೆಚ್ಚಿನ ಪಾಟೀ ಸವಾಲಿಗೆ ಮಾನ್ಯ ವಿಪ್ರಾಸಾಅ ರವರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ.